ಸಿ.ಸಿ .ನಂ. 104/2023 ಪಿಡಬ್ಲೂಃ 1

ದಿನಾಂಕಃ 10-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಸ್ ಜೆ ಎನ್ ವಕೀಲರಿಂದಃ**

3. ವ್ಯವಹಾರ ಆಗಿತ್ತು ಎಂದು ಹೇಳುವಾಗ ನಾನು ಫಿರ್ಯಾದಿ ಬ್ಯಾಂಕಿನ ಸಿಬ್ಬಂದಿಯಾಗಿದ್ದೆ ಮ್ಯಾನೇಜರ್ ಆಗಿರಲಿಲ್ಲ. ಆಗ ಇನಚಾರ್ಜ ಮ್ಯಾನೇಜರ ರಾಘವೇಂದ್ರ ಪಟಗಾರ ಹೆಗಡೆಯವರು ಆಗಿದ್ದರು. ಈ ಪ್ರಕರಣದ ಬಗ್ಗೆ ಪೂರ್ತಿ ಮಾಹಿತಿ ರಾಘವೇಂದ್ರ ಪಟಗಾರ ಹೆಗಡೆಯರಿಗೆ ಇದೆ ಎಂದರೆ ಸರಿಯಲ್ಲ. ನಾನು ಫೈಲ್ ನ್ನು ಓದಿಕೊಂಡಿದ್ದೇನೆ . ಸಂಘದ ಸಾಲವನ್ನು ಪಡೆದುಕೊಳ್ಳಲು 6 ಜನರು ಬಂದಿದ್ದರು. ಅದರಲ್ಲಿ ಗೋಪಾಲ, ಶ್ರೀಧರ ಕುಮಟಾಕರ , ಪ್ರಕಾಶ , ಕಿರಣ ಬಂದಿದ್ದರು. ಇನ್ನಿಬ್ಬರ ಹೆಸರು ನೆನಪಿಲ್ಲ. ನನಗೆ ಈ ಪ್ರಕರಣದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ . ಆ ಕಾರಣಕ್ಕೆ ನನಗೆ ಇನ್ನಿಬ್ಬರ ಹೆಸರು ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ . ನಮ್ಮ ಬ್ರ್ಯಾಂಚ್ ಕುಮಟಾದ ಹೆಚ್ ಡಿ ಎಫ್ ಸಿ ಬ್ಯಾಂಕಿನ ಮೇಲ್ಗಡೆ ಶಾನಭಾಗ ಕಾಂಪ್ಲೆಕ್ಸನಲ್ಲಿ ಇದೆ. ಮೊದಲು ನಮ್ಮ ಬ್ರ್ಯಾಂಚ್ ಬಸ್ತಿಪೇಟೆಯಲ್ಲಿತ್ತು . ನಮ್ಮ ಬ್ರ್ಯಾಂಚು ಪಸ್ಟ ಪ್ಲೋರ್ ನಲ್ಲಿತ್ತು . ಪ್ರಕಾಶ ನಾಯ್ಕ ಎಂಬುವವರು ಅಂಗವಿಕಲರಾಗಿದ್ದು ಅವರಿಗೆ ಓಡಾಡಲು ಆಗುವುದಿಲ್ಲ ಎಂದರೆ ಸಾಕ್ಷಿ ಸಾಲ ಪಡೆದುಕೊಳ್ಳುವಾಗ ಬಂದಿದ್ದರು ಎಂದು ನುಡಿದಿರುತ್ತಾರೆ . ಪ್ರಕಾಶ ನಾಯ್ಕ ಅಂಗವಿಕಲರಾಗಿದ್ದು ಅವರಿಗೆ ಓಡಾಡಲು ಆಗುವುದಿಲ್ಲ ಅವರು ನಮ್ಮ ಬ್ಯಾಂಕಿಗೆ ಬಂದು ಸಾಲವನ್ನು ಪಡೆದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಸಾಯಿಬಾಬಾ ಸಂಘ ನೋಂದಣಿಯಾಗದೇ ಇರುವ ಸಂಘ . ಸಾಲ ಕೊಡುವಾಗ ಇದು ನೋಂದಣಿಯಾಗದೇ ಇರುವ ಸಂಘ ಕಾರಣ ಸಾಲ ಕೊಡಲು ಆಗುವುದಿಲ್ಲ ಎಂದು ನಾವು ಹೇಳಿಲ್ಲ . ಅವರ ಸಂಘ ನೋಂದಣಿಯಾಗಬೇಕು ಎಂದು ಇರಲಿಲ್ಲ. ಸಾಯಿಬಾಬಾ ನವೋದಯ ಸಂಘ ಇರುವ ಬಗ್ಗೆ ಅವರು ನಮಗೆ ಠರಾವು ಮಾಡಿ ಕೊಟ್ಟಿದ್ದರು. ಆ ಠರಾವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ.

ಈ ಪ್ರಕರಣಕ್ಕೆ ಸಂಬಂಧಿಸಿಲ್ಲ ಕಾರಣ ಠರಾವನ್ನು ಹಾಜರು ಪಡಿಸಿಲ್ಲ . ನಾವು ಹೇಳುವಂತೆ ಸಾಯಿಬಾಬಾ ನವೋದಯ ಸಂಘ ಇಲ್ಲ ಕಾರಣ ಠರಾವು ಕೂಡ ಇಲ್ಲ ಎಂದರೆ ಸರಿಯಲ್ಲ . ಠರಾವು ಇಲ್ಲದ್ದರಿಂದ ಠರಾವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸುಳ್ಳು . ಠರಾವು ಎಂದರೆ ಸಂಘದ ಸದಸ್ಯರು, ಅವರ ನಿಖರವಾದ ವಿಳಾಸ, ಗುರುತಿನ ಚೀಟಿ ಇರುವ ದಾಖಲೆಗಳನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ . ಆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಈ ಪ್ರಕರಣಕ್ಕೆ ಸಂಬಂಧಿಸಿಲ್ಲ ಎಂದು ನುಡಿದಿರುತ್ತಾರೆ . ಸಾಯಿಬಾಬಾ ನವೋದಯ ಸಂಘ ಯಾವಾಗ ಸ್ಥಾಪನೆಯಾಗಿತ್ತು ದಾಖಲಾತಿಗಳನ್ನು ನೋಡಿ ಹೇಳಬೇಕು . ಅದರಲ್ಲಿ ಎಷ್ಟು ಜನರು ಸದಸ್ಯರಿದ್ದರು ದಾಖಲಾತಿ ನೋಡಿ ಹೇಳಬೇಕು. ಅದನ್ನು ಮೂಲ ಸ್ಥಾಪನೆ ಮಾಡಿದವರು ಯಾರು ಆ ಬಗ್ಗೆ ದಾಖಲಾತಿ ಪಡೆದುಕೊಂಡಿದ್ದೇವೆ . ಸಂಘ ಎಂದು ಬಂದಾಗ ವೈಯಕ್ತಿಕ ಆಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ . ಸಂಘದ ಮೂಲಕ ಒಟ್ಟಿಗೆ ಸಾಲ ಕೊಟ್ಟಿದ್ದೇವೆ . ಸಂಘ ಎಂದು ಹೇಳುವ ಬಗ್ಗೆ ಸಂಘ ಅಸ್ತಿತ್ವದಲ್ಲಿ ಇರುವ ಬಗ್ಗೆ ಹಾಗೂ ಸಂಘ ನೋಂದಣಿ ಆದ ಬಗ್ಗೆ ದಾಖಲಾತಿ ಪಡೆದುಕೊಳ್ಳಬೇಕಾಗುತ್ತದೆ ಎಂರದೆ ಸಾಕ್ಷಿ ಸಂಘದ ಅಸ್ತಿತ್ವದ ಬಗ್ಗೆ ಠರಾವು ಪಡೆದುಕೊಂಡಿದ್ದೇವೆ ಎಂದು ನುಡಿದಿರುತ್ತಾರೆ . ಸಂಘ ಯಾವ ಉದ್ದೇಶಕ್ಕೆ ಸ್ಥಾಪನೆಯಾಗಿತ್ತು ಅದರ ಬೈಲಾ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸಂಘದ ಉಳಿತಾಯ ಖಾತೆ ಹಾಗೂ ಸಾಲದ ಖಾತೆ ಮಾಡಿಕೊಂಡಿದ್ದರು. ಆ ಖಾತಾ ಉತಾರ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇವೆ . ಉಳಿತಾಯ ಖಾತೆಯನ್ನು ಅಂದಾಜು 8 ವರ್ಷದ ಹಿಂದೆ ಮಾಡಿಕೊಂಡಿದ್ದರು. ಉಳಿತಾಯ ಖಾತೆಗೆ ಸಂಬಂಧಪಟ್ಟಂತೆ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ . ಪ್ರತಿನಿಧಿ 1 ಮತ್ತು ಪ್ರತಿನಿಧಿ 2 ರವರು ಅಧ್ಯಕ್ಷರಾಗಿರುತ್ತಾರೆ . ಅಧ್ಯಕ್ಷರು ಯಾರು ಉಪಾಧ್ಯಕ್ಷರು ಯಾರು , ಕಾರ್ಯದರ್ಶಿ ಯಾರು ಮತ್ತು ಖಜಾಂಚಿ ಯಾರು ಎನ್ನುವ ಬಗ್ಗೆ ನಾವು ದಾಖಲಾತಿಯನ್ನು ಪಡೆದಿಲ್ಲ . ಸಂಘದಲ್ಲಿ ಯಾರು ಯಾರು ಯಾವ ಯಾವ ಜವಾಬ್ದಾರಿ ತೆಗೆದುಕೊಂಡಿದ್ದರು ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ . ಗೋಪಾಲ ಶೇಖರ ನಾಯ್ಕ ಇವರು ಪ್ರತಿನಿಧಿ 2 ಆಗಿರುತ್ತಾರೆ . ಅವರು ಇಷ್ಟು ಮೊತ್ತದ ಸಾಲ ಪಡೆಯಲು

ಯೋಗ್ಯತೆ ಇದ್ದಾರೆ ಎಂದು ತೋರಿಸಲು ದಾಖಲಾತಿ ಇದೆ . ಅವರ ವೈಯಕ್ತಿಕ ಮಾಹಿತಿಯನ್ನು ಅವರೇ ಕೊಟ್ಟಿದ್ದಾರೆ . ಎಲ್ಲರ ವೈಯಕ್ತಿಕ ಮಾಹಿತಿಯನ್ನು ಪಡೆದಿದ್ದೇವೆ . ಏನು ಉದ್ಯೋಗ ಮಾಡುತ್ತಾರೆ , ಎಷ್ಟು ಲಾಭ , ಎಷ್ಟು ಆದಾಯವಿದೆ ಎಂಬ ಬಗ್ಗೆ ದಾಖಲಾತಿ ಪಡೆದುಕೊಂಡಿಲ್ಲ . ಸಾಲ ಕೊಡುವಾಗ ಅವರ ಆದಾಯ, ಅವರ ಆರ್ಥಿಕ ಪರಿಸ್ಥಿತಿ ಸಾಲ ಮರುಪಾವತಿ ಮಾಡುವ ಸಾಮರ್ಥ್ಯ ಎಲ್ಲದರ ಬಗ್ಗೆ ದಾಖಲಾತಿ ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸಾಕ್ಷಿ ವೈಯಕ್ತಿಕ ಮಾಹಿತಿ ಬರೆದುಕೊಟ್ಟಿದ್ದಾರೆ ಆದರೆ ಯಾವುದೇ ದಾಖಲಾತಿಯನ್ನು ಕೊಟ್ಟಿಲ್ಲ ಎಂದು ನುಡಿದಿರುತ್ತಾರೆ . ದಾಖಲಾತಿಯನ್ನು ಕೊಡದಿದ್ದರೆ ಅರ್ಜಿಯನ್ನು ತಿರಸ್ಕರಿಸಲು ತೊಂದರೆ ಇರಲಿಲ್ಲ. ಅವರಿಗೆ ಸಾಲವನ್ನು ಕೊಡಲು ಮೇಲಿಂದ ಯಾವುದೇ ಒತ್ತಡ ಇರಲಿಲ್ಲ. ಹಳೇಯ ಮ್ಯಾನೇಜರ ಮೇಲೆ ಕೂಡ ಒತ್ತಡ ಇರಲಿಲ್ಲ. ಸಾರ್ವಜನಿಕ ಹಣವನ್ನು ಕೊಡುವಾಗ ಅವರ ಯೋಗ್ಯತೆಯನ್ನು ನೋಡಿ ಸಾಲ ಮರುಪಾವತಿ ಮಾಡುವ ಸಾಮರ್ಥ್ಯತೆಯನ್ನು ನೋಡಿ ಸಾಲ ಕೊಡಬೇಕಾಗುತ್ತದೆ ಎಂದರೆ ಸರಿ . ಅಧಿಕೃತ ನೋಂದಾಯಿತ ಸಂಘಕ್ಕೆ ಮಾತ್ರ ಸಾಲವನ್ನು ಕೊಡಬೇಕು ಎಂದರೆ ಸರಿಯಲ್ಲ. ವಸೂಲಾತಿಗೆ ಹೋದಾಗ ನಮ್ಮದು ಅಂತಹ ಸಂಘ ಇಲ್ಲ , ನಾವು ಸಾಲವನ್ನೇ ತೆಗೆದುಕೊಂಡಿಲ್ಲ ಎಂಬ ಅವಕಾಶವಿರುತ್ತದೆ ಎಂದರೆ ಸರಿಯಲ್ಲ. ಒಬ್ಬರಿಗೆ ವೈಯಕ್ತಿಕವಾಗಿ ಸಂಘದಲ್ಲಿ ಎಷ್ಟು ಸಾಲ ಕೊಟ್ಟಿದ್ದೇವೆ ದಾಖಲಾತಿ ನೋಡಿ ಹೇಳಬೇಕು. ಒಬ್ಬಬ್ಬರು ಎಷ್ಟು ಮೊತ್ತವನ್ನು ಸ್ವೀಕರಿಸಿದ್ದಾರೆ ಆ ಬಗ್ಗೆ ದಾಖಲಾತಿಯನ್ನು ಪಡೆಯಬೇಕು ಎಂದರೆ ಸರಿ . ಆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಅವರು ಎಷ್ಟು ಮೊತ್ತಕ್ಕೆ ಹಣ ಪಡೆದಿದ್ದಾರೆ ತೀರಿಸುವ ಪ್ರಶ್ನೆ ಬಂದಾಗ ಅವರು ಅಷ್ಟು ಹಣಕ್ಕೆ ಮಾತ್ರ ಜವಾಬ್ದಾರಿ ಎಂದರೆ ಸಾಕ್ಷಿ ಪ್ರತಿನಿಧಿ 1 ಮತ್ತು 2 ಇತರರ ಪರವಾಗಿ ಹಣವನ್ನು ತುಂಬಿಕೊಡುತ್ತೇವೆ ಎಂದು ಕರಾರು ಪತ್ರ ಬರೆದುಕೊಟ್ಟಿದ್ದಾರೆ . ಕರಾರು ಪತ್ರದಲ್ಲಿ ಇಂತಿಂತವರು ಇಂತಿಷ್ಟು ಹಣವನ್ನು ಪಡೆದುಕೊಂಡಿದ್ದಾರೆ , ವಿಫಲರಾದರೆ ನಾವು ಇಂತಿಷ್ಟು ಹಣವನ್ನು ಕಟ್ಟುತ್ತೇವೆ ಎಂದು ಬರೆದುಕೊಟ್ಟಿದ್ದಾರೆ . ಆ ಕರಾರು ಪತ್ರವನ್ನು ನೋಟರಿ ಮಾಡಿಲ್ಲ . ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇವೆ . ಅದನ್ನು ರಜಿಸ್ಟರ ಮಾಡಿಸಿಲ್ಲ. ಅವರು ಬರೆದುಕೊಟ್ಟರು ಎಂದು ಹೇಳುವ ದಾಖಲಾತಿ ಅದು ನಮ್ಮ ಸಂಘದ

ನಮೂನೆ ಎಂದರೆ ಸರಿ . ಅದನ್ನು ನಾವೇ ಪ್ರಿಂಟ್ ಹಾಕಿ ನಾವೇ ತಯಾರು ಮಾಡುತ್ತೇವೆ ಎಂದರೆ ಸರಿ . ಅದರಲ್ಲಿರುವ ಬರವಣಿಗೆ ನಮ್ಮ ಸಂಘದ ನೌಕರರೇ ಬರೆಯುತ್ತಾರೆ ಎಂದರೆ ಅವರನ್ನು ಕೂರಿಸಿಕೊಡು ಬರೆಯುತ್ತಾರೆ . ಅದಕ್ಕೆ ಮಾಹಿತಿಯನ್ನು ಅವರೇ ಕೊಟ್ಟಿರುತ್ತಾರೆ . ಆ ಸಮಯದಲ್ಲಿ ಯಾರು ನೌಕರು ಇದ್ದರು ಹೆಸರು ನೆನಪಿಲ್ಲ. ಅದರಲ್ಲಿ ನಿಗದಿತವಾಗಿ ಈ ರೀತಿ ಬರೆಯಬೇಕು ಎಂದು ನಮ್ಮ ಸಂಘದವರಿಗೆ ಪೂರ್ತಿ ಮಾಹಿತಿ ಇದೆ ಎಂದರೆ ಸರಿ . ಅದನ್ನು ನಮ್ಮ ಸಂಘದವರೇ ತುಂಬಿಕೊಳ್ಳುವುದು ಎಂದರೆ ಸಾಕ್ಷಿ ಅವರನ್ನು ಕೂರಿಸಿಕೊಂಡು ಬರೆದು ಸಹಿ ಪಡೆಯುತ್ತೇವೆ ಎಂದು ನುಡಿದಿರುತ್ತಾರೆ . ಸಹಿ ಪಡೆದ ನಂತರ ಎಲ್ಲಾ ದಾಖಲಾತಿಗಳನ್ನು ಅವರಿಗೆ ಜರೆಕ್ಸ ಮಾಡಿ ಕೊಟ್ಟಿಲ್ಲ . ಸಾಲದ ಸೆಂಕ್ಷನ್ ಲೇಟರ ಕೊಟ್ಟಿರುತ್ತೇವೆ . ಜರೆಕ್ಸ ಪ್ರತಿಗಳನ್ನು ಕೊಟ್ಟಿದ್ದೇವೆ ಎಂದು ಬರೆಸಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಯಾವ ಬ್ಯಾಂಕಿನವರು ಆ ರೀತಿ ಕೊಡುವುದಿಲ್ಲ ಎಂದು ನುಡಿದಿರುತ್ತಾರೆ . ಅವರು ಹೇಳುವುದು ಒಂದು , ನಾವು ಬರೆಯುವುದು ಒಂದು ಎಲ್ಲಾ ಸಾಧ್ಯತೆಗಳು ಇರುತ್ತವೆ ಎಂದರೆ ಸರಿಯಲ್ಲ . ವ್ಯವಹಾರ ಮಾಡಬೇಕಾದರೆ ಪಾರದರ್ಶಕವಾಗಿ ವ್ಯವಹಾರ ಮಾಡಬೇಕಾಗುತ್ತದೆ ಎಂದರೆ ಸರಿ . ನಾವು ಎಲ್ಲಾ ದಾಖಲಾತಿಗಳನ್ನು ಆರೋಪಿ ಸಂಘಕ್ಕೆ ಕೊಡದೆ ಇರುವ ಕಾರಣ ನಾವು ಮಾಡಿರುವ ವ್ಯವಹಾರ ಪಾರದರ್ಶಕವಾಗಿಲ್ಲ ಎಂದರೆ ಸರಿಯಲ್ಲ. ಅವರಂದ ಯಾವ ಯಾವ ದಾಖಲಾತಿಗಳನ್ನು ಪಡೆದುಕೊಂಡಿದ್ದೇವೆ ಎಂಬ ಬಗ್ಗೆ ಹಿಂಬರಹ ಕೊಡಬೇಕಾಗುತ್ತದೆ ಎಂದರೆ ಸಾಕ್ಷಿ ಅವರಿಂದ ಆಧಾರ ಕಾರ್ಡ ಹಾಗೂ ರೇಶನ ಕಾರ್ಡ ಪಡೆದಿದ್ದೇವೆ ಎಂದು ನುಡಿದಿರುತ್ತಾರೆ . ಬೆಲರೆ ದಾಖಲಾತಿ ಕೇಳಿದ್ದೆವು ಅವರು ಕೊಟ್ಟಿಲ್ಲ. ಹಣ ತೆಗೆದುಕೊಳ್ಳಲು ಬಂದಾಗ ಎಲ್ಲಾ ದಾಖಲಾತಿ ಪಡೆದುಕೊಳ್ಳುವ ಕರ್ತವ್ಯ ನಮ್ಮದಾಗಿರುತ್ತದೆ ಎಂದರೆ ಸರಿ . ಅಂತಹ ಹಣವನ್ನು ತೆಗೆದುಕೊಂಡ ಹೋದ ನಂತರ ಬರೆದ ಇರುವ ಸಾಧ್ಯತೆ ಇರುತ್ತದೆ ಎಂದರೆ ಸರಿ . ಆ ಕಾರಣದಿಂದ ಹಣ ಕೊಡುವ ಪೂರ್ವದಲ್ಲಿ ಭದ್ರತೆಗಾಗಿ ಎಲ್ಲಾ ದಾಖಲಾತಿಗಳನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ , ಎಲ್ಲಾ ದಾಖಲಾತಿ ಕೇಳುತ್ತೇವೆ ಆದರೆ ಅವರು ಕೊಟ್ಟಿರುವುದಿಲ್ಲ. ಆ ರೀತಿ ದಾಖಲಾತಿ ಕೊಡದೇ ಇರುವಾಗ ಸಾಲ ಕೊಡಲು ಬರುವುದಿಲ್ಲ ಎಂದು ನಾವು ಹೇಳಿಲ್ಲ ಎಂದರೆ ಸಾಕ್ಷಿ ಅವರು ಸಣ್ಣ ಸಣ್ಣ ಉದ್ಯೋಗ

ಮಾಡುತ್ತಿದ್ದರು ಒಳ್ಳೆಯ ವ್ಯಾಪಾರಸ್ಥರಾಗಿದ್ದರು ಕಾರಣ ಸಾಲವನ್ನು ಕೊಟ್ಟಿದ್ದೇವೆ . ನಾವು ಅವರ ಯಾವುದೇ ಸಂಘಕ್ಕೆ ಸಾಲವನ್ನು ಕೊಡದೇ ಇದ್ದುದರಿಂದ ನಾವು ಅವರಿಂದ ಯಾವುದೇ ದಾಖಲಾತಿಯನ್ನು ಪಡೆದುಕೊಂಡಿಲ್ಲ ಎಂದರೆ ಸುಳ್ಳು .

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.